50 ಸುವರ್ಣ ಸಂಭ್ರಮ

## ನಿಮ್ಮೊಡನೆ

# ಅಮಲಿನ ಕಟಕಟೆಯಲ್ಲಿ ಸಮಾಜ

ಮದ್ಯದ ಅಮಲಿನಲ್ಲಿರುವ ತರುಣಿಯರು ಟ್ರಾಫಿಕ್ ಪೊಲೀಸರೊಂದಿಗೆ ಜಗಳ ಮಾಡಿಕೊಳ್ಳುವ ಸುದ್ದಿಗಳು ನಗರ ಪ್ರದೇಶಗಳಿಂದ ಆಗಾಗ ವರದಿಯಾಗುತ್ತಲೇ ಇರುತ್ತವೆ. ಇಂಥ ಜಟಾಪಟಿಗಳನ್ನು ಹೊಸಕಾಲದ ಹೆಣ್ಣುಮಕ್ಕಳು ಕುಡಿತದ ಚಟಕ್ಕೆ ತೆರೆದುಕೊಳ್ಳುತ್ತಿರುವುದಕ್ಕೆ ಉದಾಹರಣೆಯಾಗಿ ನೀಡಿ ಸೋಜಿಗ ಪಡುವವರಿದ್ದಾರೆ. ಈ ಬೆರಗನ್ನು ಹೆಚ್ಚಿಸುವಂತೆ, ಕುಡಿತದಲ್ಲಿ ಗಂಡಸರನ್ನು ಮಹಿಳೆಯರು ಮೀರಿಸುತ್ತಾರೆ ಎಂದು ಹೇಳುವ ಸಮೀಕ್ಷೆಗಳೂ ಪ್ರಕಟಗೊಳ್ಳುತ್ತಿರುತ್ತವೆ. ಆದರೆ, ಮದ್ಯ ಸೇವನೆಯನ್ನು ಒಂದು ಸಾಮಾಜಿಕ ನಡವಳಿಕೆಯ ರೂಪದಲ್ಲಿ ಸಮಾಜ ಹೆಚ್ಚೂ ಕಡಿಮೆ ಒಪ್ಪಿಕೊಂಡಿರುವ ಸಂದರ್ಭದಲ್ಲಿ ಹೆಣ್ಣುಮಕ್ಕಳು ಕುಡಿಯುವುದು ಸೋಜಿಗವೂ ಅಲ್ಲ, ಅದು ಅನುಚಿತವೂ ಅಲ್ಲ. ಆದರೆ, ಕುಡಿತ ಚಟವಾಗಿ ಬದಲಾಗುವುದು, ಅದರಲ್ಲೂ ಮಧ್ಯಮವರ್ಗದ ಮಹಿಳೆಯರು ಮದ್ಯದ ಗೀಳಿಗೆ ಒಳಗಾಗುವುದು ಖಂಡಿತಾ ಆತಂಕದ ಸಂಗತಿ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ವೈದ್ಯರು ಮತ್ತು ಮನಃಶಾಸ್ತ್ರಜ್ಞರ ತಂಡದ ಇತ್ತೀಚಿನ ಅಧ್ಯಯನವೊಂದು ಮಹಿಳೆಯರು ಕುಡಿತದ ಸಮಸ್ಯೆಗಳಿಂದಾಗಿ ಹೆಚ್ಚು ಬಳಲುತ್ತಿರುವುದನ್ನು ಹಾಗೂ 10ರಿಂದ 20 ವರ್ಷದೊಳಗಿನ ಹೆಣ್ಣುಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಮದ್ಯ ಮತ್ತು ಮಾದಕವಸ್ತುಗಳ ಸೇವನೆಗೆ ಒಳಗಾಗಿರುವುದನ್ನು ಗುರ್ತಿಸಿದೆ. ಗರ್ಭಿಣಿ ಮಹಿಳೆಯರು ಆಲ್ಕೋಹಾಲ್‌ನ ಸಮಸ್ಯೆಗಳಿಗೆ ಹೆಚ್ಚು ತೆರೆದುಕೊಂಡಿರುವುದನ್ನು ಅಧ್ಯಯನ ವಿಶೇಷವಾಗಿ ಗಮನಿಸಿದೆ. ಗರ್ಭ ಧರಿಸಿದ ಸಂದರ್ಭದಲ್ಲಿ ಮಹಿಳೆಯರು ಮದ್ಯ ಸೇವಿಸುವುದರಿಂದಾಗಿ, ಭ್ರೂಣದ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಇಂಥ ಸಂದರ್ಭದಲ್ಲಿ ಜನಿಸುವ ಮಕ್ಕಳು ನರ ದೌರ್ಬಲ್ಯಕ್ಕೆ ಒಳಗಾಗುವ ಸಾಧ್ಯತೆಯಿದೆ. ಬಾಣಂತನದ ಸಂದರ್ಭದಲ್ಲಿ ಕೂಡ ಮದ್ಯದ ಗೀಳು ಹಸುಗೂಸುಗಳ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಗಂಡಸರಲ್ಲಿನ ಮದ್ಯದ ಗೀಳು ಅವರ ದೇಹವನ್ನಷ್ಟೇ ದುರ್ಬಲಗೊಳಿಸಿದರೆ, ತಾಯಂದಿರ ಈ ಸಮಸ್ಯೆ ಮಕ್ಕಳ ಮೇಲೂ ಪರಿಣಾಮ ಬೀರುತ್ತದೆ. ಋತುಚಕ್ರದಲ್ಲಿ ವ್ಯತ್ಯಯ, ರಕ್ತಹೀನತೆ, ಜೀರ್ಣಕ್ರಿಯೆಯಲ್ಲಿ ವ್ಯತ್ಯಾಸ– ಹೀಗೆ ಅತಿ ಕುಡಿತದಿಂದ ಹಲವು ಸಮಸ್ಯೆಗಳು ಮಹಿಳೆಯರನ್ನು ಕಾಡುತ್ತವೆ.

ಮಹಿಳೆಯರ ಕುಡಿತದ ಚಟದಿಂದ ಸಮಾಜದ ನೈತಿಕ ಸ್ವಾಸ್ಥ್ಯ ಹಾಳಾಗುತ್ತದೆ ಎಂದು ಹೇಳುವುದು ಕ್ಲೀಷೆಯೂ ಹೌದು, ಪುರುಷ ಪಕ್ಷಪಾತದ ಹೇಳಿಕೆಯೂ ಹೌದು. ಮದ್ಯ ಸೇವಿಸುವ ಹೆಣ್ಣುಮಕ್ಕಳನ್ನು ಸಾಂಸ್ಕೃತಿಕ ದುರಂತದ ರೂಪದಲ್ಲಿ ನೋಡುವುದು ದುಷ್ಟತನವೂ ಹೌದು. ಕುಟುಂಬ, ಸಮಾಜದ ಅಥವಾ ಸಂಸ್ಕೃತಿಯ ಆರೋಗ್ಯ ಕಾಪಾಡುವಲ್ಲಿ ಪುರುಷ ಮತ್ತು ಮಹಿಳೆ– ಇಬ್ಬರ ಪಾಲೂ ಇದೆ. ಆದರೆ, ಚರಿತ್ರೆಯುದ್ದಕ್ಕೂ ಪುರುಷರ ಕುಡಿತದ ಚಟದಿಂದ ಕುಟುಂಬಗಳು ಬೀದಿಪಾಲಾಗಿರುವ ಉದಾಹರಣೆಗಳನ್ನು ನೋಡಬಹುದು. ಇದರ ಜೊತೆಗೆ, ಮದ್ಯಪಾನ ವಿರೋಧದ ರೂಪದಲ್ಲಿ ಹೆಣ್ಣನ್ನು ಕಾಣಬಹುದು. ಆದರೆ, ಬದಲಾದ ಸಾಮಾಜಿಕ ಸಂದರ್ಭದಲ್ಲಿ ಮಹಿಳೆ ಕೂಡ ಕುಡಿತದ ಛತ್ರಿಯಡಿ ಬಂದು ನಿಂತಿದ್ದಾಳೆ. ಇದರರ್ಥ, ಕುಡಿತದ ದುಷ್ಪರಿಣಾಮಗಳ ಕುರಿತಂತೆ ಸಮಾಜ ಹಿಂದೆಂದಿಗಿಂತಲೂ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಾದ ಕಾಲ ಇಂದಿನದಾಗಿದೆ.

ಬದಲಾದ ಸಾಮಾಜಿಕ ಸಂದರ್ಭದಲ್ಲಿ ಮಹಿಳೆ ಕೂಡ ಕುಡಿತದ ಛತ್ರಿಯಡಿ ಬಂದು ನಿಂತಿದ್ದಾಳೆ. ಇದರರ್ಥ, ಕುಡಿತದ ದುಷ್ಪರಿಣಾಮಗಳ ಕುರಿತಂತೆ ಸಮಾಜ ಹಿಂದೆಂದಿಗಿಂತಲೂ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಾದ ಕಾಲ ಇಂದಿನದಾಗಿದೆ.

ಮಧ್ಯಮ ವರ್ಗದ ಹೆಣ್ಣುಮಕ್ಕಳಲ್ಲಿನ ಕುಡಿತದ ಚಟದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಮಾಜಿಕ ಸಂದರ್ಭವನ್ನು ಕೂಡ ಗಮನಿಸಬೇಕಾಗಿದೆ. ಸಮಾನತೆಗಾಗಿ ನಿರಂತರವಾಗಿ ದನಿ ಎತ್ತಬೇಕಾಗಿರುವ ಮಹಿಳೆಯನ್ನು, ಕೌಟುಂಬಿಕ ಮತ್ತು ದುಡಿಯುವ ಪರಿಸರದಲ್ಲಿ ಎರಡನೆಯವಳಾಗಿಯೇ ಗುರ್ತಿಸಲಾಗುತ್ತಿದೆ. ದುಡಿಮೆ ಮತ್ತು ದಕ್ಷತೆಯಲ್ಲಿ ಪುರುಷನ ಸರಿಸಮ ಅಥವಾ ಅವನಿಗಿಂತಲೂ ಮಿಗಿಲಾದರೂ ಅದಕ್ಕೆ ತಕ್ಕ ಗೌರವ–ಸಂಭಾವನೆ ದೊರೆಯುತ್ತಿಲ್ಲ. ಮನೆಯ ಒಳಗೂ ಹೊರಗೂ ದುಡಿಯಬೇಕಾದ ಅನಿವಾರ್ಯತೆ ಅನೇಕ ಮಹಿಳೆಯರದು. ಹೀಗೆ, ಒಮ್ಮೆಗೇ ಎದುರಿಸಬೇಕಾದ ಅನೇಕ ಒತ್ತಡಗಳಿಂದ ತಾತ್ಕಾಲಿಕವಾಗಿಯಾದರೂ ಪಾರಾಗುವ ಅಡಗುತಾಣವಾಗಿ ಕೆಲವು ಹೆಣ್ಣುಮಕ್ಕಳಿಗೆ ಮದ್ಯಸೇವನೆ ಕಾಣಿಸುತ್ತದೆ. ಇನ್ನು ಕೆಲವು ಮಹಿಳೆಯರಿಗೆ ದಣಿದ ದೇಹಕ್ಕೆ ನಿದ್ದೆ ಬರಿಸುವ ಔಷಧಿಯ ನೆಪವಾಗಿ ಕುಡಿತ ಒದಗಿಬರುತ್ತದೆ. 'ವಿವಾಹಿತ ಸ್ತ್ರೀಯರಲ್ಲಿ ಕುಡಿತದ ಪ್ರಮಾಣ ಹೆಚ್ಚು' ಎನ್ನುವ ಸಮೀಕ್ಷೆಗಳು ಕೂಡ ಕುಟುಂಬದ ಚೌಕಟ್ಟಿನಲ್ಲಿ ಮಹಿಳೆ ಹೆಚ್ಚು ಘಾಸಿಗೊಳ್ಳುತ್ತಿರುವ ಸತ್ಯವನ್ನೇ ಕಾಣಿಸುತ್ತಿವೆ.

ಮದ್ಯಪಾನದ ಬಗ್ಗೆ ಸಮಾಜದಲ್ಲಿ ಮೊದಲಿನಿಂದ ನೈತಿಕ ವಿರೋಧ ಇದ್ದೇ ಇದೆ. ಆದರೆ, ಈ ಪ್ರತಿರೋಧದ ಕಟಕಟೆಯಲ್ಲಿ ಈವರೆಗೆ ಕಾಣಿಸಿಕೊಂಡಿದ್ದೆಲ್ಲ ಪುರುಷರೇ. ಈಗ ಮಹಿಳೆಯರಲ್ಲೂ ಅಮಲಿನ ವ್ಯಸನ ಹೆಚ್ಚುತ್ತಿರುವುದರಿಂದ, ಕಟಕಟೆಯಲ್ಲಿ ಇಡೀ ಸಮಾಜವೇ ನಿಲ್ಲಬೇಕಿದ್ದು, ತನ್ನನ್ನು ತಾನು ಪ್ರಶ್ನಿಸಿಕೊಳ್ಳಬೇಕಾಗಿದೆ. ಈ ಆತ್ಮವಿಮರ್ಶೆಯ ನಿಕಷದಲ್ಲಿ ಹೆಣ್ಣುಮಕ್ಕಳ ದೈನಿಕ ಹಗುರಾಗುವುದು ಸಾಧ್ಯವಾದಲ್ಲಿ ಕುಡಿತದ ಸಮಸ್ಯೆಯೂ ಕಡಿಮೆಯಾಗುವುದು ಸಾಧ್ಯವಿದೆ.

■ ರಘುನಾಥ ಚ.ಹ.

